ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಜಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಪ್ರವಾಸಿಗರಿಗೆ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

391 (3713) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) :- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡಿ ದೇವಾಲಯಕ್ಕೆ ಪ್ರವಾಸಿಗರನ್ನು ಆಕರ್ಷಿಸಲು ಮತ್ತು ದೇವಾಲಯದ ಆದಾಯವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳೇನು?

ಆ) ಪ್ರವಾಸಿಗರಿಗೆ ನೀಡಲು ಉದ್ದೇಶಿಸಿರುವ ಸೌಲಭ್ಯಗಳೇನು? ದೇವಾಲಯದ ಆದಾಯ ಮತ್ತು ಖರ್ಚು ಎಷ್ಟು?

ಇ) ದೇವಾಲಯದ ಆದಾಯವನ್ನು ಅಲ್ಲಿಗೆ ಖರ್ಚು ಮಾಡಲಾಗುತ್ತಿದೆಯೇ ಕಳೆದ 2 ವರ್ಷದ ವಿವರ ನೀಡುವುದು.

ಶ್ರೀ ಬಾಬುರಾವ್ ಚಿಂಚನಸೂರ (ಮುಜರಾಯಿ ಸಚಿವರು) :

ಅ) ಮೈಸೂರು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಾಲಯಕ್ಕೆ ಬರುವ ಭಕ್ತಾಧಿಗಳನ್ನು ಪ್ರವಾಸಿಗರನ್ನು ಆಕರ್ಷಿಸಲು ಹಾಗೂ ಈ ಮೂಲಕ ಆದಾಯವನ್ನು ಹೆಚ್ಚಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಪ್ರಸ್ತುತ ದೇವಾಲಯದಲ್ಲಿ ಪ್ರತಿದಿನ ವಿಶೇಷ ಪ್ರಸಾದ ತಯಾರಿಸಿ ಭಕ್ತಾಧಿಗಳಿಗೆ ವಿತರಣೆ ಮಾಡಲಾಗುತ್ತಿದೆ. ದೇವಾಲಯಕ್ಕೆ ಪ್ರತಿನಿತ್ಯ ಬರುವ ಭಕ್ತಾಧಿಗಳಿಗೆ ಪ್ರಸಾದ ವಿನಿಯೋಗಿಸುವ ಉದ್ದೇಶಕ್ಕಾಗಿ ದಾಸೋಹ ಭವನ ನಿರ್ಮಿಸಲು ಉದ್ದೇಶಿಸಿದೆ.

2) ಸದರಿ ದೇವಾಲಯಕ್ಕೆ ಆಗಮಿಸುವ ಭಕ್ತಾಧಿಗಳು: ಪ್ರವಾಸಿಗರು ತಂಗಲು 20 ಕೊಠಡಿಗಳ ಒಂದು ಸುಸಜ್ಜಿತ ಅತಿಥಿಗೃಹ ನಿರ್ಮಿಸಲು ಉದ್ದೇಶಿಸಿದೆ.

3) ಚಾಮುಂಡಿ ಬೆಟ್ಟದ ಬುಡದ ತಾವರೆಕಟ್ಟೆ ಗ್ರಾಮದ ಆಕರ್ಷಿಸಲು ಶ್ರೀ ಚಾಮುಂಡೇಶ್ವರಿ ಸ್ವಾಗತ ಕಮಾನು(ಆರ್ಚ್) ನಿರ್ಮಾಣ ಮಾಡಲು ಉದ್ದೇಶಿಸಿದೆ.

4) ಭಕ್ತಾಧಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ನಗರ ನೀರು ಸರಬರಾಜು ಮಂಡಲಿಯವರಿಗೆ ದೇವಾಲಯದ ವತಿಯಿಂದ ಪಾವತಿಸಿದ್ದು, ಈ ಕಾಮಗಾರಿ ಪೂರ್ಣಗೊಂಡಿದ್ದು, ನೀರಿನ ವ್ಯವಸ್ಥೆ ಸುಧಾರಿಸಲಾಗುತ್ತಿದೆ.

5) ಬೆಟ್ಟದಲ್ಲಿ ಶೌಚಾಲಯವನ್ನು ದುರಸ್ಥಿ ಮಾಡಿಸಿ ಶೌಚಾಲಯಕ್ಕೆ ನೀರಿನ ಮತ್ತು ವಿದ್ಯುತ್ ಸೌಕರ್ಯವನ್ನು ಕಲ್ಪಿಸಿ ಭಕ್ತಾಧಿಗಳಿಗೆ: ಪ್ರವಾಸಿಗರಿಗೆ ಅನುಕೂಲ ಕಲ್ಪಿಸಿಕೊಡಲಾಗಿದೆ.

6) ಚಾಮುಂಡಿಬೆಟ್ಟಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಹೆಚ್ಚಿನ ವಾಹನಗಳ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಅ) ಪ್ರವಾಸಿಗರಿಗೆ ತಂಗುವಿಕೆಗಾಗಿ 20 ಕೊಠಡಿಗಳ ಸುಸಜ್ಜಿತ ಅತಿಥಿಗೃಹ, ದಾಸೋಹ ಭವನ ನಿರ್ಮಾಣ ಮೈಸೂರಿನಲ್ಲಿ ದಿವಾನ್ ಪೂರ್ಣಯ್ಯ ಮೆಮೋರಿಯಲ್ ಕಲ್ಯಾಣ ಮಂಟಪ ಹಾಗೂ ಬೆಟ್ಟಕ್ಕೆ ಬರುವ ದಾರಿಯ ತಾವರೆಕಟ್ಟೆ ಗ್ರಾಮದ ರಸ್ತೆಗೆ ಸ್ವಾಗತ ಕಮಾನು ನಿರ್ಮಿಸಲು ಉದ್ದೇಶಿಸಿದೆ. ಬೆಟ್ಟಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ ಲಯನ್ಸ್ ಕ್ಲಬ್ ವತಿಯಿಂದ ಬೆಟ್ಟದಲ್ಲಿ ಒಂದು ಟೆಲಿಸ್ಕೋಪ್ ನಿರ್ಮಾಣ ಮಕ್ಕಳ ಉದ್ಯಾನವನ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದೆ. ದೇವಾಲಯದ ಗೋಪುರ ದುರಸ್ಥಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಳೆದ ಎರಡು ವರ್ಷಗಳ ಆದಾಯ ಮತ್ತು ವೆಚ್ಚ ಈ ಕೆಳಕಂಡಂತೆ ಇದೆ.

ವರ್ಷ	ಆದಾಯ	ವೆಚ್ಚ
1998-1999	ರೂ. 1,58,09,570=00	47,05,872=00
1999-2000	ರೂ. 1,74,14,755=00	66,76,539=00

ಸದರಿ ದೇವಾಲಯದ ಖರ್ಚನ್ನು ಆ ದೇವಾಲಯದಿಂದಲೇ ಭರಿಸಲಾಗುತ್ತಿದೆ. ಆದಾಯ ಹೆಚ್ಚಿಗೆ ಇರುವುದರಿಂದ ವಿವಿಧ ರೀತಿಯ ಅಭಿವೃದ್ಧಿ ಕಾಮಗಾರಿಗಳನ್ನು ಭಕ್ತಾದಿಗಳ ಹಿತದೃಷ್ಟಿಯಿಂದ ಕೈಗೊಳ್ಳಲಾಗಿದೆ.

ಕಳೆದ 2 ವರ್ಷಗಳ ಆದಾಯ ಮತ್ತು ವೆಚ್ಚ ಈ ಕೆಳಕಂಡಂತಿದೆ.

ವರ್ಷ	ಆದಾಯ	ವೆಚ್ಚ
1998-1999	ರೂ. 1,58,09,570=00	47,05,872=00
1999-2000	ರೂ. 1,74,14,755=00	66,76,539=00

ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ):- ಮಾನ್ಯ ಅಧ್ಯಕ್ಷರೇ, ಈ ಚಾಮುಂಡಿ ಬೆಟ್ಟದ ಮೇಲೆ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಏನಿದೆ ಅದು ನನ್ನ ಕ್ಷೇತ್ರದಲ್ಲಿ ಬರುವಂತಾದ್ದೂ. ಇಲ್ಲಿ ಅನೇಕ ವಿಚಾರಗಳನ್ನು ಹೇಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. ಆದರೆ ಇನ್ನೂ ಅದು ಪ್ರಾರಂಭವಾಗಿಲ್ಲ. ಮಾನ್ಯ ಮಂತ್ರಿಗಳು ಹೇಳಬೇಕು. ಇದರಲ್ಲಿ ಒಂದು ಅಡ್ಹೆಸರಿ ಕಮಿಟಿ ಇದೆ. ಕಳೆದ ಸುಮಾರು ಎರಡು ವರ್ಷಗಳಿಂದ ಅಡ್ಹೆಸರಿ ಕಮಿಟಿಯನ್ನು ರಚನೆ ಮಾಡಿಲ್ಲ. ಅದನ್ನು ರಚನೆ ಮಾಡದೇ ಇದ್ದರೂ ಸಹ ತಮ್ಮ ಆದಾಯ ಎಷ್ಟು ಎನ್ನತಕ್ಕಂಥ ವಿಚಾರಗಳನ್ನು ನಮ್ಮ ಮುಂದಿಡುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಸಹಜ ಎನ್ನತಕ್ಕಂತಹ ಮಾತನ್ನು ಅವರು

11.30 ಎ.ಎಂ.

ವಿಷದಪಡಿಸಬೇಕು. ಇದು ಮೊದಲನೆಯದು. ಇನ್ನು ಎರಡನೆಯದು ಅಂದರೆ ಇವತ್ತು ಅವರೇನು ಸಮುದಾಯ ಭವನ ಮತ್ತು ದಾಸೋಹ ಭವನ ಮಾಡಬೇಕೆಂದು ಹೊರಟಿದ್ದಾರೆ, ಈ ಎಲ್ಲಾ ಕೆಲಸಗಳನ್ನೂ ಮುಜರಾಜಿ ಸಂಸ್ಥೆಯಿಂದ ಮಾಡುವಂಥ ಕೆಲಸಗಳನ್ನು ಲ್ಯಾಂಡ್ ಆರ್ಮಿ ಮುಖಾಂತರವೇ, ಮಾಡಬೇಕೆಂದು ಸರ್ಕಾರದ ನಿರ್ಣಯವಾಗಿದೆ. ಆದರೂ ಸಹ ಯಾರೋ ಒಬ್ಬ

ಪ್ರೈವೇಟ್ ಕಂಟ್ರ್ಯಾಕ್ಟರಿಗೆ ಆ ಕೆಲಸವನ್ನು ಫಿಕ್ಸ್ ಮಾಡಿ, ಗೋಪ್ಯವಾಗಿ 53 ಲಕ್ಷ ರೂಪಾಯಿಗಳ ಚೆಕ್ ಅನ್ನು ಅವರಿಗೆ ಈಗಾಗಲೇ ಸಂದಾಯ ಇನ್ನೂ ಕೊಟ್ಟಿಲ್ಲ. ಅಗ್ರಿಮೆಂಟ್ ಆಗಿಲ್ಲ, ಕೆಲಸ ಪ್ರಾರಂಭವಾಗಿಲ್ಲ ಇದರ ಬಗ್ಗೆ ಇವರೇನು ತನಿಖೆ ಮಾಡಿದ್ದಾರೆ? ಏನು ಕ್ರಮ ಕೈಗೊಂಡಿದ್ದಾರೆ ಎಂಬ ಮಾತನ್ನು ಮಾನ್ಯ ಸಚಿವರು ಈ ಸಭೆಗೆ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಬಾಬುರಾವ್ ಬಸವಣ್ಣಪ್ಪ ಚುಂಚನಸೂರು:- ಮಾನ್ಯ ಅಧ್ಯಕ್ಷರೇ, ಸದರಿ ಕಾಮಗಾರಿಗೆ ಟೆಂಡರ್ ಕರೆದು, ಅತಿ ಕಡಿಮೆ ಟೆಂಡರ್‌ದಾರರಿಗೆ ಕಾಮಗಾರಿಯನ್ನು ವಹಿಸಲು ಹಾಗೂ ಸದರಿ ಕಾಮಗಾರಿಗೆ ರಾಜ್ಯ ಮುಖ್ಯ ವಾಸ್ತುಶಿಲ್ಪ ಇಲಾಖೆಯಿಂದ ಅನುಮೋದನೆ ಪಡೆದು , ಸಕ್ಷಮ ಅಧಿಕಾರಿಯಿಂದ ಕಾಮಗಾರಿಗೆ ಮಂಜೂರಾತಿಯನ್ನೂ ಪಡೆದಿರುತ್ತೇವೆ. ಮತ್ತು ಆ ಬಗ್ಗೆ ಷರತ್ತುಗಳನ್ನೂ ಸಹ ಸರ್ಕಾರಿ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಅಧ್ಯಕ್ಷರು:- ಮುಖ್ಯ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರವನ್ನು ಈಗಾಗಲೇ ಮಾನ್ಯ ಸದಸ್ಯರು ಓದಿಕೊಂಡಿದ್ದಾರೆ. ಅವರ ಸಪ್ಲಿಮೆಂಟರಿ ಪ್ರಶ್ನೆಗಳಿಗೆ ತಾವು ಉತ್ತರ ಹೇಳಿದರೆ ಸಾಕು.

ಶ್ರೀ ಎ.ಎಸ್. ಗುರುಸ್ವಾಮಿ :- ನಾನು ಎರಡು ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಿದ್ದೇನೆ. ಆ ಟೆಂಪಲ್‌ಗೆ ಸಂಬಂಧಪಟ್ಟ ಹಾಗೆ ಒಂದು ಕಮಿಟಿ ಇದೆ. ಆ ಕಮಿಟಿಯನ್ನು ಕಳೆದ ಎರಡು ವರ್ಷಗಳಿಂದ ರಚನೆ ಮಾಡಿಲ್ಲ ಅದು ಕೆಲಸವನ್ನೂ ಮಾಡಿಲ್ಲ. ಅಲ್ಲಿ ಸೂಪರವಿಷನ್ ಮಾಡುವುದಕ್ಕೆ ಕಮಿಟಿ ಇಲ್ಲ. ಎಲ್ಲಾ ಎಕ್ಸಿಕ್ಯೂಟೀವ್ ಬ್ಯುರೋಕ್ರೇಟ್ಸ್‌ನವರದೇ ದರ್ಬಾರ್ ನಡೆದಿದೆ. ಆ ಕಮಿಟಿಯನ್ನು ಇನ್ನೂ ಏಕೆ ರಚನೆ ಮಾಡಿಲ್ಲವೆಂದು ಕೇಳುತ್ತಿದ್ದೇನೆ.

ಶ್ರೀ ಬಾಬುರಾವ್ ಬಸವಣ್ಣಪ್ಪ ಚುಂಚನಸೂರ್:- ಆ ಕಮಿಟಿಯ ಅವಧಿ ಮುಗಿದಿದೆ. ಸಧ್ಯದಲ್ಲಿಯೇ ಹೊಸ ಕಮಿಟಿಯನ್ನು ರಚಿಸುತ್ತೇವೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೇ, ಅಲ್ಲಿ ದಾಸೋಹ ಭವನ ನಿರ್ಮಾಣ ಒಂದು ಕೋಟಿ ರೂಪಾಯಿಗಳ ಕೆಲಸವನ್ನು ಲ್ಯಾಂಡ್ ಆರ್ಮಿಗೆ ಕೊಡಬೇಕೆಂದು ಸರ್ಕಾರದ ಆಜ್ಞೆಯಾಗಿದ್ದರೂ ಸಹ ಪ್ರೈವೇಟ್‌ನವರಿಗೆ ಕೊಟ್ಟಿದ್ದಾರೆ. ಯಾರಿಗಾಗಿ ಈ 53, ಲಕ್ಷ ರೂಪಾಯಿಗಳನ್ನು ಯಾವುದೇ ಅನುಮೋದನೆ ಇಲ್ಲದೆ ಕೊಟ್ಟಿದ್ದಾರೆ ಎಂಬುದನ್ನು ಈ ಸಭೆಗೆ ಮಾನ್ಯ ಸಚಿವರು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನಸೂರು:- ಸನ್ಮಾನ್ಯ ಅಧ್ಯಕ್ಷರೆ, 53 ಲಕ್ಷ ರೂಪಾಯಿಗಳ ಮುಂಗಡ ಹಣ ಕೊಟ್ಟಿರುವುದು ತಪ್ಪು. ಅದಕ್ಕೆ ಈಗಾಗಲೇ ಅವರ ಮೇಲೆ ಕ್ರಮ ತೆಗೆದು ಕೊಂಡಿದ್ದೇವೆ. ಆ ಟೆಂಡರನ್ನು ಕ್ಯಾನ್ಸಲ್ ಮಾಡಿ, ಲ್ಯಾಂಡ್ ಆರ್ಮಿಗೆ ಕೊಡಬೇಕೆಂದು ಸಹ ಆದೇಶ ಕೊಟ್ಟಿದ್ದೇವೆ.

ಶ್ರೀ ಎ. ರಾಮದಾಸ್:- ಆ ಕಾಮಗಾರಿಗೆ ಟೆಂಡರ್ ಕರೆದಿದ್ದರು. ಯಾವ ಟೆಂಡರ್‌ಗೆ ಅಪ್ರೂವಲ್ ಆಗಿದೆಯೋ ಅವರು ಕೆಲಸವನ್ನು ಪ್ರಾರಂಭ ಮಾಡುವಂಥ ಸಮಯದಲ್ಲಿ ಸನ್ಮಾನ್ಯ ಸಚಿವರು ಟೆಂಡರ್ ಆಗಿರುವುದಕ್ಕೆ ಸ್ಟೇ ಕೊಟ್ಟಿದ್ದಾರೆ. ಆದರೆ, ಪೀಸ್- ರೇಟ್ ಆಗಿರುವುದಕ್ಕೆ ಸ್ಟೇ ಕೊಟ್ಟಿಲ್ಲ. ಟೆಂಡರ್ ವರ್ಕ್‌ಗಳಿಗೆ ಏಕೆ ಸ್ಟೇ ಕೊಟ್ಟಿದ್ದಾರೆಂದು ಹೇಳಬೇಕು ಎರಡನೆಯದು ಈಗಾಗಲೇ

ಚಾಮುಂಡಿ ಬೆಟ್ಟದಲ್ಲಿ ಗೋಪುರದಲ್ಲಿರುವಂಥ ವಿಗ್ರಹಗಳನ್ನು ರಿಪೇರಿ ಮಾಡುವುದಕ್ಕೋಸ್ಕರರವಾಗಿ ಆ ಕೆಲಸವನ್ನು ಎಲೆಕ್ಟ್ರಿಕಲ್ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆ.

ಅಧ್ಯಕ್ಷರು:- ಅದು ಪ್ರತ್ಯೇಕ ಪ್ರಶ್ನೆ.

ಶ್ರೀ ಎ. ರಾಮದಾಸ್:- ಅವರು ಯಾವುದು 5 ಕೋಟಿ ರೂಪಾಯಿಗಳ ಹಣದ ಬಗ್ಗೆ ಹೇಳಿದ್ದಾರೆ. ಅದರಲ್ಲಿಯೇ ಎಲೆಕ್ಟ್ರಿಕಲ್ ಕಂಟ್ರಾಕ್ಟರಿಗೆ ಮೇಲಿನ ಗೋಪುರಗಳನ್ನು ರಿಪೇರಿ ಮಾಡುವಂಥ ಕೆಲಸವನ್ನು ಪೀಸ್ ರೇಟಿಗೆ ಕೊಟ್ಟಿದ್ದಾರಲ್ಲ. ಇದು ಸರಿಯೇ? ಇದಕ್ಕೆ ಸಂಬಂಧಪಟ್ಟ ಪತ್ರವನ್ನು ಕೂಡ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಮನ್ಯ ಕಂದಾಯ ಸಚಿವರಿಗೆ ಬರೆದಿದ್ದೇನೆ. ಆದರೂ ಕೂಡ ಈ ವರ್ಕ್ ಪ್ರಾರಂಭವಾಗಿದೆ. ಇವೆರಡರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಎ. ಎಸ್. ಗುರುಸ್ವಾಮಿ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ಲ್ಯಾಂಡ್ ಆರ್ಮಿಯವರಿಗೆ ಕೊಡಬೇಕಾದ ಕೆಲಸವನ್ನು ಪ್ರೈವೇಟ್‌ನವರಿಗೆ ಕೊಟ್ಟಿದ್ದಾರೆ. ಅವರು ಯಾವ ಕಂಟ್ರಾಕ್ಟರು? 53 ಲಕ್ಷ ರೂಪಾಯಿಗಳ ಚೆಕ್ ಯಾವ ರೀತಿ ಕೊಟ್ಟರು? ಅವರು ಯಾರು ಎಂಬುದನ್ನು ತಿಳಿಸಬೇಕು.

ಶ್ರೀ ಬಾಬುರಾವ್ ಬಸವಣ್ಣಪ್ಪ ಬೆಂಚನಸೂರ್:- ಸನ್ಮಾನ್ಯ ಅಧ್ಯಕ್ಷರೇ, ಟೆಂಡರ್ ಅಪ್ರೂವಲ್‌ಗೆ ಅದು ಗವರ್ನಮೆಂಟಿಗೆ ಬರಬೇಕಾಗಿತ್ತು. ಅಲ್ಲಿಯ ಡಿವಿಜನಲ್ ಕಮಿಷನರ್, ಗವರ್ನಮೆಂಟಿನ ಪರ್ಮಿಷನ್ ಇಲ್ಲದೆ ಟೆಂಡರ್ ಕೊಟ್ಟಿದ್ದ ಸಲುವಾಗಿ, ನಾನು ಈಗಾಗಲೇ ಕ್ರಮ ತೆಗೆ ದುಕೊಂಡು, ಆ ಟೆಂಡರನ್ನು ಕ್ಯಾನ್ಸಲ್ ಮಾಡಿ, ಲ್ಯಾಂಡ್ ಆರ್ಮಿಗೆ ಕೊಡಬೇಕೆಂದು ಆದೇಶ ಕೊಟ್ಟು ಬಂದಿರುತ್ತೇನೆ.

(ಗೊಂದಲ)

ಅಧ್ಯಕ್ಷರು:- ಎಲೆಕ್ಟ್ರಿಕಲ್ ಕಂಟ್ರಾಕ್ಟರಿಗೆ ರಿಪೇರಿಗೆ ಕೊಟ್ಟಿದ್ದಾರೆಂದು ಹೇಳಿದರೆ,He has to get answer from the Muzrai Department.

ಎಲೆಕ್ಟ್ರಿಕಲ್ ಕಂಟ್ರಾಕ್ಟರಿಗೆ ರಿಪೇರಿ ಕೆಲಸ ಏಕೆ ಕೊಟ್ಟಿದ್ದಾರೆಂಬುದನ್ನು ನೀವು ವೆರಿಫೈ ಮಾಡಿ ಯಾರಾದರೂ ತಪ್ಪಿತಸ್ಥರಿದ್ದರೆ, ಅವರ ಮೇಲೆ ತಕ್ಕ ಕಾರ್ಯಕ್ರಮ ಕೈಗೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೋದ ಕಡೆಯಲ್ಲೆಲ್ಲಾ 2 ಕೋಟಿ, 4 ಕೋಟಿ, 3 ಕೋಟಿ, 50, ಲಕ್ಷ ಕೊಡುತ್ತೇವೆಂದು ಹೇಳುತ್ತಾರೆ. ಹಾಗಾದರೆ ಅವರ ಇಲಾಖೆ ಬಾಬ್ತು ಎಷ್ಟು ಹಣ ಇದೆ ಎಂಬುದನ್ನುಹೇಳಲಿ.

ಅಧ್ಯಕ್ಷರು:- ಇದು ಜನರಲ್ ಪ್ರಶ್ನೆ, ಇಲ್ಲಿರತಕ್ಕ ಪ್ರಶ್ನೆಯೇ ಬೇರೆ. ಚಾಮುಂಡಿ ಬೆಟ್ಟಕ್ಕೆ ಪ್ರವಾಸಿಗರ ಸೌಕರ್ಯದ ಬಗ್ಗೆ ಇಲ್ಲಿರುವ ಪ್ರಶ್ನೆ.

(ಗೊಂದಲ)

ಅಧ್ಯಕ್ಷರು:- ಎಲೆಕ್ಟ್ರಿಕಲ್ ಕಂಟ್ರಾ್ಯಕ್ಟರಿಗೆ ರಿಪೇರಿ ಕೆಲಸ ಕೊಟ್ಟಿದ್ದಾರೆಂದು ಹೇಳಿದಿರಿ. ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಾಬುರಾವ್ ಬಸವಣ್ಣಪ್ಪ ಬೆಂಚನಸೂರ್:- ನಾನು ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಹೆಚ್.ಸಿ. ಬಸವರಾಜು:- 53 ಲಕ್ಷ ರೂಪಾಯಿಗಳ ದುರುಪಯೋವಾಗಿದೆ ಎಂಬುದನ್ನು ಮಾನ್ಯ ಸಚಿವರು ಈ ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಯಾವ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಿದರು ಎಂಬುದನ್ನು ಈ ಸದನಕ್ಕೆ ತಿಳಿಸಬೇಕು.

ಅಧ್ಯಕ್ಷರು:- ಅವರನ್ನು ಕ್ಯಾನ್ಸಲ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರಲ್ಲ.

ಶ್ರೀ ಬಾಬುರಾವ್ ಬಸವಣ್ಣ ಚಿಂಚನಸೂರ್:- ನಾವು 50 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಹೊತ್ತಿನಲ್ಲಿ ಸರ್ಕಾರದ ಪರ್ಮಿಷನ್ ತೆಗೆದುಕೊಳ್ಳಬೇಕಾಗಿತ್ತು. ಡಿವಿಜನಲ್ ಕಮೀಷನರ್ ಸರ್ಕಾರದ ಗಮನಕ್ಕೆ ತರದೇ ಅಲ್ಲಿ ಪೇಮೆಂಟ್ ಮಾಡಿದ್ದಾರೆ. ಅದಕ್ಕೆ ಈಗಾಗಲೇ ನಾವು ಅಸೆಂಬ್ಲಿ ಕರೆಯುವುದಕ್ಕಿಂತ ಮುಂಚೆಯೇ ಕ್ರಮ ತೆಗೆದುಕೊಂಡಿದ್ದೇವೆ. ಆ ಕೆಲಸವನ್ನೂ ನಿಲ್ಲಿಸಿ ಬಿಟ್ಟಿದ್ದೇವೆ. ಆ ಕೆಲಸವನ್ನೂ ನಿಲ್ಲಿಸಿ ಬಿಟ್ಟಿದ್ದೇವೆ. ನಾವು ಆವರ ಮೇಲೆ ಸೀರಿಯಸ್ ಆಕ್ಷನ್ ತೆಗೆದುಕೊಂಡಿದ್ದೇವೆ.

ಮೈಸೂರಿನ ಮಂಡಕಳ್ಳಿಯಲ್ಲಿ ಇರುವ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವುದಕ್ಕೆ ಭೂಸ್ವಾಧೀನ ಪಡಿಸಿಕೊಳ್ಳುವುದು.

392 (3681)

ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :- ಮಾನ್ಯ ನಾಗರೀಕ ವಿಮಾನಯಾನ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರಿನ ಬಳಿ ಮಂಡಕಹಳ್ಳಿಯಲ್ಲಿರುವ ವಿಮಾನ ನಿಲ್ದಾಣವನ್ನು ಮೇಲುದರ್ಜೆಗೇರಿಸುವ ಸಲುವಾಗಿನ ಪೂರ್ವಭಾವಿ ಕೆಲಸಗಳಲ್ಲೊಂದಾದ ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಆ) ಈ ಸಂಬಂಧ ಎಷ್ಟು ಎಕರೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲು ತೀರ್ಮಾನಿಸಲಾಗಿದೆ?

ಇ) ಇಲ್ಲಿಯವರೆಗೆ ಎಷ್ಟು ಎಕರೆ ಜಮೀನನ್ನು ಭೂ ಸ್ವಾಧೀನಪಡಿಸಿಕೊಳ್ಳಲಾಗಿದೆ? ಉಳಿಕೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಇನ್ನೂ ಎಷ್ಟು ಸಮಯ ಬೇಕಾಗುವುದು?